3. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಅಧ್ಯಕ್ಷರು: O.K. ಈಗ ಪ್ರಶ್ನೋತ್ತರ ತೆಗೆದುಕೊಳ್ಳೋಣ. ಶ್ರೀ ಕೆ.ಎಸ್.ಮಂಜುನಾಥಗೌಡ ಇಲ್ಲ, ಶ್ರೀ ಸಿ.ಬಿ.ಸುರೇಶ್‌ಬಾಬು ಪ್ರಶ್ನೆ ಕೇಳಿ.

ಶಾಲಾ ಕಾಲೇಜುಗಳಲ್ಲಿ ಕೊಠಡಿಗಳ ಕೊರತೆ

17(287), ಶ್ರೀ ಸುರೇಶ್ ಬಾಬು ಸಿ.ಬಿ. (ಚಿಕ್ಕನಾಯಕನಹಳ್ಳಿ)

ಅ) ಚಿಕ್ಕನಾಯಕನಹಳ್ಳಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಎಲ್ಲಾ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಶಾಲಾ ಕೊಠಡಿಗಳು ಇವೆಯೇ;

ಆ) ಇಲ್ಲದಿದ್ದಲ್ಲಿ, ಶಾಲಾ ಕೊಠಡಿಗಳನ್ನು ನಿರ್ಮಿಸಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ; (ಮಾಹಿತಿ ನೀಡುವುದು);

ಇ) ಯಾವ ಯಾವ ಶಾಲಾ ಕಾಲೇಜುಗಳಿಗೆ ಕೊಠಡಿಯ ಅವಶ್ಯಕತೆಯಿದೆ; (ಶಾಲಾವಾರು ಮಾಹಿತಿ ನೀಡುವುದು)

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಇಲ್ಲ.

ಆ) ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ, ಕೊಠಡಿಗಳ ಅಗತ್ಯತೆಯ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ ಅನುದಾನದ ಲಭ್ಯತೆಯಾಧಾರ ಕ್ರಮವಹಿಸಲಾಗುವುದು.

ಎಸ್.ಡಿ.ಪಿ. ಯೋಜನೆಯಡಿ ಸರ್ಕಾರಿ ಪ್ರೌಢಶಾಲೆಗಳ ನಿರ್ಮಾಣಕ್ಕಾಗಿ ಪ್ರತಿ ವರ್ಷ ಹಂತ ಹಂತವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. 2012–13ನೇ ಸಾಲಿನಲ್ಲಿ 02

ಕೊಠಡಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. 02 ಪ್ರೌಢಶಾಲೆಗಳಿಗೆ 03 ಕೊಠಡಿಗಳ ಅವಶ್ಯಕತೆ ಇದೆ.

ರಾಜ್ಯದಲ್ಲಿ ನಡೆಯುತ್ತಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ನಬಾರ್ಡ್ ಸಹಯೋಗದ ಆರ್‌ಐಡಿಎಫ್ ಯೋಜನೆಯಡಿ ಹಾಗೂ ಅಪೆಂಡಿಕ್ಸ್–ಇ ಯೋಜನೆಯಡಿ ಮತ್ತು ಇತರೆ ಯೋಜನೆಯಡಿ ಕಟ್ಟಡ/ಕೊಠಡಿಗಳನ್ನು ನಿರ್ಮಿಸಲಾಗುತ್ತಿದೆ.

ಇ) ಸರ್ವ ಶಿಕ್ಷಣ ಅಭಿಯಾನದಡಿ 30 ಪ್ರಾಥಮಿಕ ಶಾಲೆಗಳಿಗೆ ಕೊಠಡಿ ಮಂಜೂರಾತಿ ಪ್ರಸ್ತಾವನೆ ಸಲ್ಲಿಸಿದೆ. ಅಗತ್ಯತೆಯ ಬಗ್ಗೆ ಪರಿಶೀಲಿಸಿ ಅನುದಾನದ ಲಭ್ಯತೆಯಾಧಾರ ಕ್ರಮವಹಿಸಲಾಗುವುದು. ಶಾಲಾವಾರು ಪಟ್ಟಿ ಲಗತ್ತಿಸಿದೆ.

ಕ್ರ.ಸಂ.	ಸರ್ಕಾರಿ ಪದವಿ ಪೂರ್ವ ಕಾಲೇಜು	ಅವಶ್ಯಕವಿರುವ ಕೊಠಡಿ
1	ಚಿಕ್ಕನಾಯಕನಹಳ್ಳಿ	04
2	ಹುಳಿಯಾರ್ ಕೆಂಕೆರೆ	04
3	ಗೋಡೆಕೆರೆ	02
4	ಬೋರನಕಣಿವೆ	02
5	ಕಾತ್ರಿಕೆಹಾಳ್	02
6	(ಬಾಲಕಿಯರ) ಹುಳಿಯಾರ್	04
7	ದೊಡ್ಡಣ್ಣೆಗೆರೆ	01
8	ಬರಗೂರು ಬೆಳಗುಲಿ	01

ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕನಾಯಕನಹಳ್ಳಿ ಹೆಚ್ಚುವರಿ ಕೊಠಡಿಗಳ ಬೇಡಿಕೆ ಪಟ್ಟಿ

ಕ್ರ ಸಂ.	ಶಾಲೆಗಳ ಹೆಸರು	ಕೊಠಡಿ ಸಂಖ್ಯೆ	ಅಂದಾಜು ಮೊತ್ತ
1	ಜಿ.ಹೆಚ್.ಪಿ.ಎಸ್. ಕೆಂಪರಾಯನಹಟ್ಟಿ	1	650000
2	ಜಿ.ಎಲ್.ಪಿ.ಎಸ್. ಅಜ್ಜೇನಹಳ್ಳಿ	1	650000
3	ಜಿ.ಎಲ್.ಪಿ.ಎಸ್. ಬಳ್ಳಕಟ್ಟೆ ತಾಂಡ್ಯ	1	650000
4	ಜಿ.ಎಲ್.ಪಿ.ಎಸ್. ಕೋಡಿಹಳ್ಳಿ	1	650000
5	ಜಿ.ಎಲ್.ಪಿ.ಎಸ್. ಮೋಚಕಟ್ಟೆ	1	650000
6	ಜಿ.ಎಲ್.ಪಿ.ಎಸ್. ಹಳೆಲಂಬಾಣಿಹಟ್ಟಿ	1	650000
7	ಜಿ.ಹೆಚ್.ಪಿ.ಎಸ್. ಅಂಕಸಂದ್ರ	1	650000
8	ಜಿ.ಯು.ಎಲ್.ಪಿ.ಎಸ್. ಮುದ್ದೇನಹಳ್ಳಿ	1	650000
9	ಜಿ.ಹೆಚ್.ಯು.ಎಲ್.ಎಸ್. ಕಂಪನಹಳ್ಳಿ	1	650000
10	ಜಿ.ಎಲ್.ಪಿ.ಎಸ್. ಸಯ್ಯದ್‌ಸಾಬ್‌ಪಾಳ್ಯ	1	650000
11	ಜಿ.ಎಲ್.ಪಿ.ಎಸ್. ಭೀಮಸಂದ್ರ	1	650000
12	ಜಿ.ಹೆಚ್.ಪಿ.ಎಸ್. ಸೋರಲಮಾವು	1	650000
13	ಜಿ.ಎಲ್.ಪಿ.ಎಸ್. ಕೊಡಲಾಗರ	1	650000
14	ಜಿ.ಎಲ್.ಪಿ.ಎಸ್. ಕಾರೇಹಳ್ಳಿ	2	1300000
15	ಜಿ.ಎಲ್.ಪಿ.ಎಸ್. ವಡೇರಹಳ್ಳಿ	1	650000
16	ಜಿ.ಎಲ್.ಪಿ.ಎಸ್. ಕಾಮನಹಳ್ಳಿ	1	650000
17	ಜಿ.ಎಲ್.ಪಿ.ಎಸ್. ರಾಮಪ್ಪನಹಳ್ಳಿ	1	650000
18	ಜಿ.ಎಲ್.ಪಿ.ಎಸ್. ನಾಯಕನಪಾಳ್ಯ	1	650000
19	ಜಿ.ಹೆಚ್.ಪಿ.ಎಸ್. ದಬ್ಬಗುಂಟೆ	2	1300000
20	ಜಿ.ಎಲ್.ಪಿ.ಎಸ್. ಗೇಮನಾಯಕನತಾಂಡ್ಯ	1	650000
21	ಜಿ.ಎಲ್.ಪಿ.ಎಸ್. ಹೊಸಹಳ್ಳಿ ಪಾಳ್ಯ	1	650000

22	ಜಿ.ಹೆಚ್.ಪಿ.ಎಸ್. ಹೊನ್ನೆಬಾಗಿ	1	650000
23	ಜಿ.ಹೆಚ್.ಪಿ.ಎಸ್. ಮಲಗೋಂಡನಹಳ್ಳಿ	1	650000
24	ಜಿ.ಎಲ್.ಪಿ.ಎಸ್. ಕೋರಗೆರೆ	1	650000
25	ಜಿ.ಎಲ್.ಪಿ.ಎಸ್. ಮೋಟಿಹಳ್ಳಿವಡ್ಡರಹಟ್ಟಿ	1	650000
26	ಜಿ.ಹೆಚ್.ಪಿ.ಎಸ್. ಹೆಚ್ ತಮ್ಮಡಿಹಳ್ಳಿ	1	650000
27	ಜಿ.ಹೆಚ್.ಪಿ.ಎಸ್. ಯಳನಡು	1	650000
28	ಜಿ.ಹೆಚ್.ಪಿ.ಎಸ್. ಕಾತ್ರಿಕೆಹಾಳ್	1	650000
29	ಜಿ.ಎಲ್.ಪಿ.ಎಸ್. ಕ್ಯಾತನಾಯಕನಹಳ್ಳಿ	1	650000
30	ಜಿ.ಎಲ್.ಪಿ.ಎಸ್. ಸಾಲ್ಕಟ್ಟೆ ತಾಂಡ್ಯ	1	650000
	ಒಟ್ಟು ಅಂದಾಜು ಮೊತ್ತ	32	**20800000**

ಪ್ರೌಢಶಾಲೆಗಳಿಗೆ ಕೊಠಡಿ (ಎಸ್.ಡಿ.ಪಿ. ಯೋಜನೆಯಡಿ)

1	ಸರ್ಕಾರಿ ಪ್ರೌಢಶಾಲೆ, ಗೋಡೆಕೆರೆ	1	650000
2	ಸ.ಪ.ಪೂ.ಕಾಲೇಜು ಬೋರನಕಣಿವೆ (ಪ್ರೌವಿ)	2	1300000

ಶ್ರೀ ಸಿ.ಬಿ.ಸುರೇಶ್‌ಬಾಬು(ಚಿಕ್ಕನಾಯಕನಹಳ್ಳಿ): ಅಧ್ಯಕ್ಷರೆ, ನಮ್ಮಲ್ಲಿ ಸರ್ಕಾರಿ ಕಾಲೇಜುಗಳು ಪ್ರಾರಂಭವಾಗಿ ಹಲವಾರು ವರ್ಷಗಳಾದರೂ ಇನ್ನೂ ಮೂಲಭೂತ ಸೌಕರ್ಯಗಳನ್ನು, ಕೊಠಡಿಗಳನ್ನು ಒದಗಿಸಿಕೊಡಲಿಕ್ಕೆ ಸಾಧ್ಯವಾಗಿಲ್ಲ. ಮಕ್ಕಳು ಮರದಡಿಯಲ್ಲಿ ಕುಳಿತುಕೊಂಡು ಓದುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ನಾವೆಲ್ಲರೂ ಕೂಡ ನಿಸ್ಸಹಾಯಕರಾಗಿದ್ದೇವೆ. ಹಾಗಾಗಿ ಕೊಠಡಿಗಳ ವ್ಯವಸ್ಥೆಯನ್ನು ಎಷ್ಟು ಬೇಗ ಮಾಡಿಕೊಡುತ್ತಾರೆ ಎಂದು ನಾನು ತಮ್ಮ ಮೂಲಕ ಸನ್ಮಾನ್ಯ ಸಚಿವರಲ್ಲಿ ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ್(ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಉತ್ತರವನ್ನು ಒದಗಿಸಲಾಗಿದೆ. ಅವರ ಭಾಗದಲ್ಲಿ ಎಷ್ಟು ಕೊಠಡಿಗಳ ಅವಶ್ಯಕತೆ ಇದೆ ಎನ್ನುವುದನ್ನು ಕೂಡ ನಾನು ಈಗಾಗಲೇ

ಅವರಿಗೆ ಮಾಹಿತಿಯನ್ನು ಕೊಟ್ಟಿದ್ದೇನೆ. ಈಗಾಗಲೇ 2012–13 ರಲ್ಲಿ 02 ಕೊಠಡಿಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಇನ್ನು 02 ಪ್ರೌಢಶಾಲೆಗಳಿಗೆ 03 ಕೊಠಡಿಗಳ ಅವಶ್ಯಕತೆ ಇದೆ ಅದನ್ನು ಕೂಡ ಸಧ್ಯದಲ್ಲೇ ಕೈಗೆತ್ತಿಕೊಳ್ಳುವ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ತನ್ವೀರ್ ಸೇಠ್: ಮಾನ್ಯ ಸಚಿವರು ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೆ 40.00 ಲಕ್ಷ ರೂಪಾಯಿಗಳನ್ನು ರಿಪೇರಿಗಾಗಿ ಕೊಟ್ಟರು. ಆದರೆ ಅದು ಎಲ್ಲಿ ಬಳಕೆಯಾಗುತ್ತಿದೆ ಎಂಬ ಬಗ್ಗೆ ಸ್ಪಷ್ಟೀಕರಿಸಬೇಕು. ಅವರು ಹಣ ಬಿಡುಗಡೆ ಮಾಡಿದ್ದಾರೆ. ಆದರೆ ಎಲ್ಲಿ ಆ ಹಣ ಬಳಕೆಯಾಗಿದೆ ಎಂದು ಹೇಳಬೇಕು.

ಅಧ್ಯಕ್ಷರು: ಅವರು ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೇಳುತ್ತಿದ್ದಾರೆ. ನಿಮ್ಮದೇನಿದ್ದರೂ ಆ ಬಗ್ಗೆ separate ಆಗಿ ಕೇಳಿ.

(ಗೊಂದಲ)

ಶ್ರೀ ಸಿ.ಟಿ.ರವಿ: ರಸ್ತೆ ಕ್ಷೇತ್ರದ್ದು, ಈ ವಿಷಯ ಇಡೀ ರಾಜ್ಯಕ್ಕೆ ಸಂಬಂಧಿಸಿದ್ದಾಗಿದೆ.

ಶ್ರೀ ಎಂ.ಟಿ.ಕೃಷ್ಣಪ್ಪ: ಅಧ್ಯಕ್ಷರೆ, ಇದು ಇಡೀ ರಾಜ್ಯಕ್ಕೆ ಸಂಬಂಧಿಸಿದ್ದು ಎಲ್ಲರಿಗೂ ಅವಕಾಶವನ್ನು ಕೊಡಿ.

ಶ್ರೀ ಕೆ.ಶಿವಮೂರ್ತಿ: ನಮ್ಮ ಕ್ಷೇತ್ರದಲ್ಲಿ ಶಾಲಾ ಕೊಠಡಿಗಳು ಬೀಳುವ ಪರಿಸ್ಥಿತಿಯಲ್ಲಿದೆ. ಮಕ್ಕಳು ಕುಳಿತುಕೊಳ್ಳುವುದಕ್ಕೆ ಆಗುತ್ತಿಲ್ಲ. ಪಾಠ ಮಾಡಲಿಕ್ಕಾಗುತ್ತಿಲ್ಲ. ಅದರ ದುರಸ್ತಿಯಾಗಬೇಕಾಗಿದೆ.

ಶ್ರೀ ಎನ್.ಹೆಚ್.ಕೋನರೆಡ್ಡಿ: ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಶಾಲಾಕಾಲೇಜುಗಳಿಗೆ ಕೊಠಡಿಗಳು ಬಹಳ ಬೇಕಾಗಿವೆ. ಇದರ ಬಗ್ಗೆ education department ನವರು ಗಮನ ಹರಿಸಬೇಕು.

ಅಧ್ಯಕ್ಷರು: ಅವರು ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೇಳಿದ್ದಾರೆ.

ಶ್ರೀ ಕೆ.ಶಿವಮೂರ್ತಿ: ಇದು policy matter ಆಗುತ್ತದೆ. ಎಲ್ಲಾ ಕ್ಷೇತ್ರಗಳಿಗೂ ಅನ್ವಯವಾಗುತ್ತದೆ.

ಅಧ್ಯಕ್ಷರು: ಈ ಬಗ್ಗೆ ಪ್ರತ್ಯೇಕವಾಗಿ ಕೇಳಿ, ಚರ್ಚೆ ಮಾಡಿ ಬೇಡವೆಂದವರ್ಯಾರು?

ಶ್ರೀ ಕೆ.ಶಿವಮೂರ್ತಿ: ಆ ಪ್ರಶ್ನೆಗೆ ಪೂರಕವಾಗಿ ಕೇಳುತ್ತಿದ್ದೇನೆ.

ಅಧ್ಯಕ್ಷರು: ಪೂರಕವಾಗಿ ಕೇಳುವುದಕ್ಕೆ ಬರುವುದಿಲ್ಲ. ಅವರಿಂದ ಉತ್ತರ ಕೇಳಬೇಕಲ್ಲವೇ? ನೋಡಿ ಅವರ ಪ್ರಶ್ನೆಗೆ ಸಚಿವರು ಉತ್ತರ ತಯಾರು ಮಾಡಿಕೊಂಡು ಬಂದಿರುತ್ತಾರೆ. ಈಗ ಇಡೀ ರಾಜ್ಯಕ್ಕೆ ಸಂಬಂಧಿಸಿದಂತೆ ಕೇಳಿದರೆ ಅವರು ಹೇಳುವುದಕ್ಕೆ ತಯಾರಿರುತ್ತಾರೆಯೇ? ಈಗ ನೀವು ಮಾನ್ಯ ಸದಸ್ಯರುಗಳು ಎತ್ತಿದ ಪ್ರಶ್ನೆಯನ್ನು ನಾನು ಗಮನಿಸಿದ್ದೇನೆ. ಈ ಬಗ್ಗೆ ಪ್ರತ್ಯೇಕವಾಗಿ ಒಂದು statement ವಗೈರೆ ಮಾಡಲಿಕ್ಕೆ ಅವರಿಗೆ ಹೇಳುತ್ತೇನೆ.

ಶ್ರೀ ಸಿ.ಬಿ.ಸುರೇಶ್‌ಬಾಬು: ಅಧ್ಯಕ್ಷರೆ, ನಮ್ಮ ಕ್ಷೇತ್ರದಲ್ಲಿ 8 ಕಾಲೇಜುಗಳಿವೆ. ಅದರಲ್ಲಿ ಸುಮಾರು 20 ಕೊಠಡಿಗಳ ಕೊರತೆ ಇದೆ. ಸಚಿವರು 03 ಕೊಠಡಿಗಳ ಬಗ್ಗೆ ಹೇಳುತ್ತಿದ್ದಾರೆ. ದಯಮಾಡಿ 20 ಕೊಠಡಿಗಳ ಅವಶ್ಯಕತೆ ಇದೆ, ದಯಮಾಡಿ ಹಂತ ಹಂತವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆಂದು ಹೇಳುತ್ತಾರೆ. ಮಕ್ಕಳು ಪ್ರತಿ ವರ್ಷವೂ ಶಾಲೆಗೆ ಹೋಗುವಂಥ ಸಂದರ್ಭದಲ್ಲಿ ಅವರು ಬೀದಿಯಲ್ಲಿ ಕುಳಿತುಕೊಂಡು ಪಾಠ ಕೇಳುವುದಾದರೆ ಖಂಡಿತ ಮಕ್ಕಳು ಯಾವರೀತಿ ಸರ್ಕಾರಿ ಶಾಲೆಗಳಿಗೆ/ಕಾಲೇಜುಗಳಿಗೆ ವಿದ್ಯಾಭ್ಯಾಸ ಮಾಡಲಿಕ್ಕೆ ಬರುತ್ತಾರೆ? ದಯಮಾಡಿ ಇದಕ್ಕೆ ಹೆಚ್ಚಿನ ಒತ್ತು ಕೊಡಬೇಕು. ಪ್ರೌಢ ಶಾಲೆಗಳಿಗೂ 32 ಕೊಠಡಿಗಳ ಕೊರತೆ ಇದೆ. ಅದಕ್ಕೆ 2.00 ಕೋಟಿ ರೂಪಾಯಿಗಳು ಬೇಕೆಂದು ಹೇಳಿದ್ದಾರೆ. ಅದನ್ನು ಬಿಡುಗಡೆ ಮಾಡಲಿಕ್ಕೆ ಜಾಸ್ತಿಯಾಗುವುದಿಲ್ಲ. ದಯಮಾಡಿ ಅದನ್ನು Finance Department ಗೆ ತಂದು ಎಲ್ಲ ಕ್ಷೇತ್ರಗಳಲ್ಲಿಯೂ ಕೊಠಡಿಗಳ ಹಾಗೂ ಮೂಲಭೂತ ಸೌಕರ್ಯಗಳ ಕೊರತೆ

ಇದೆ, ಅದನ್ನು ಯಾವಾಗ ಪೂರ್ಣ ಮಾಡಿಕೊಡುತ್ತಾರೆಂದು ದಯಮಾಡಿ ಸಚಿವರು ಈ ಸದನದಲ್ಲಿ ಹೇಳಬೇಕೆಂದು ನಾನು ತಮ್ಮ ಮೂಲಕ ಕೇಳಬಯಸುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ್(ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಮಾನ್ಯ ಸದಸ್ಯರು ಕೇಳಿರುವಂತೆ 30 ಕೊಠಡಿಗಳ ಅಗತ್ಯತೆ ಬಗ್ಗೆ ನಾನು ಉತ್ತರದಲ್ಲಿ ಹೇಳಿದ್ದೇನೆ. ಒಂದು ಕೊಠಡಿ ಎಂದರೆ ಸುಮಾರು 6.00 ಲಕ್ಷ ರೂಪಾಯಿಗಳ ಹಣ ಮಂಜೂರು ಮಾಡಬೇಕಾಗುತ್ತದೆ. ತುರ್ತಾಗಿ ಏನು ಮಾಡಲಿಕ್ಕೆ ಸಾಧ್ಯವಿದೆ ಆ ಪ್ರಯತ್ನವನ್ನು ಮಾಡಿದ್ದೇವೆ. ಇಡೀ ರಾಜ್ಯದಲ್ಲಿ totally ಸುಮಾರು ಹೆಚ್ಚುಕಡಿಮೆ 7,002 ಕೊಠಡಿಗಳು ಬೇಕಾಗುತ್ತದೆ. ಆದ್ದರಿಂದ ಆದ್ಯತೆ ಮೇಲೆ ಪ್ರಯತ್ನವನ್ನು ನಾವು ಮಾಡಿದ್ದೇವೆ. ತೀರ ಅಗತ್ಯವಿದ್ದರೆ ಅದನ್ನು ಮಂಜೂರು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು: ಈಗ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ರೀತಿ ನೀತಿಯನ್ನು ನೋಡಿದರೆ ಇದು ಇಡೀ ರಾಜ್ಯದ ಸಮಸ್ಯೆಯಾಗಿದೆ. ಹಾಗಾಗಿ ಇದು ಆಗ, ಈಗ ಮಾಡುತ್ತೇವೆ ಎನ್ನುವ ಪ್ರಶ್ನೆ ಬೇಡ. ಏನಾದರೂ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿ ರಾಜ್ಯದ ಎಲ್ಲಾ ಭಾಗಗಳಲ್ಲಿಯೂ ಈ ಅಗತ್ಯ ಪೂರೈಸಲಿಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಕಿಮ್ಮನೆ ರತ್ನಾಕರ್(ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಪ್ರಯತ್ನ ಮಾಡುತ್ತೇವೆ.

ಶ್ರೀ ಎನ್.ಹೆಚ್.ಕೋನರೆಡ್ಡಿ: ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಗಮನಹರಿಸಿ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕು. ಹಂತ ಹಂತವಾಗಿ ಕೊಡುತ್ತೇವೆಂದರೆ ಆಗುವುದಿಲ್ಲ. ಮುಖ್ಯಮಂತ್ರಿಗಳು ಈ ಬಗ್ಗೆ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕು. ಇದು ಬಹಳ ಗಂಭೀರವಾದ ಸಮಸ್ಯೆಯಾಗಿದೆ.

ಅಧ್ಯಕ್ಷರು: ನಿರ್ಧಾರವನ್ನು ಅವರೇ ಮಾಡುವುದು.

ಶ್ರೀ ಬಿ.ಸುರೇಶ್‌ಗೌಡ: ಅಧ್ಯಕ್ಷರೆ, ಹೋದ ಅಸೆಂಬ್ಲಿ ಸಂದರ್ಭದಲ್ಲಿ Toilet ಮತ್ತೊಂದು ವಿಚಾರಕ್ಕೆಂದು 40.00 ಲಕ್ಷ ರೂಪಾಯಿಗಳ ಹಣ ಬಿಡುಗಡೆ ಮಾಡಿದ್ದಾರೆ. ಇಲ್ಲಿಯವರೆಗೆ ಆ ಹಣ ಬಂದಿಲ್ಲ. ಮೊನ್ನೆ review meeting ನಲ್ಲಿ ಆ ಹಣ ಡಿಸಿಯವರಿಗೆ transfer ಆಗಿದೆ ಎಂದು ನಮ್ಮ ಜಿಲ್ಲೆಯವರು ಹೇಳಿದರು. ಬಿಡುಗಡೆ ಆದ ಹಣ execution ಆಗಲಿಕ್ಕೆ 4-5 ತಿಂಗಳು ವಿಳಂಬವಾದರೆ ನಾವು ಯಾವರೀತಿ ಕೆಲಸ ಮಾಡಬೇಕು? ನಾವು ನಿಮ್ಮಲ್ಲಿ ಮನವಿ ಮಾಡುತ್ತಿದ್ದೇವೆ. ಶಾಲಾ ಮಕ್ಕಳೆಲ್ಲಾ ಬೀದಿಯಲ್ಲಿ ಕುಳಿತಿದ್ದಾರೆ. ನಬಾರ್ಡ್‌ನಿಂದ ಹಣ ಬಿಡುಗಡೆಯಾಗಿದೆ, ಮಂತ್ರಿಗಳು Land and Armyಗೆ ಕಲಸ ಮಾಡಿ ಎಂದು ಆದೇಶ ಮಾಡಿದ್ದಾರೆ. ಆದರೆ Land and Army ಯವರು ಇಲ್ಲಿಯವರೆಗೆ ಕೆಲಸ ಮಾಡಿಲ್ಲ. ಆ Land and Army ಯವರಿಗೆ ಟೆಂಡರ್ ಕೊಡುವ ಬದಲು PWD or RDPRನವರಿಗೋ ಕೊಟ್ಟಿದ್ದರೆ ತಕ್ಷಣ ಕೆಲಸ ಆಗಿರುತ್ತಿತ್ತು. ನಬಾರ್ಡ್ ಹಾಗೂ Land and Army ಯವರು ಯಾವಾಗ ಮಾಡುತ್ತಾರೆಂದು ಸಚಿವರು ಉತ್ತರ ಹೇಳಬೇಕು. ಹಾಗಾಗಿ ಶಿಕ್ಷಣ ಸಚಿವರು ಇಲಾಖೆಯ ಅಭಿವೃದ್ಧಿ ಕಡೆಗೆ ಹೆಚ್ಚಿನ ಒತ್ತನ್ನು ಕೊಡಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

ಶ್ರೀ ಕೆ.ಶಿವಮೂರ್ತಿ: ನಮಲ್ಲಿ Mining ಮಾಡಿ dynamite ಹಾಕಿ ಸಿಡಿಸುತ್ತಿದ್ದಾರೆ. Schools ಬಿರುಕು ಬಿಟ್ಟಿವೆ. ಅಲ್ಲಿರುವ ಶಾಲಾ ಶಿಕ್ಷಕರು ನಾವು ಪಾಠ ಮಾಡಲಿಕ್ಕಾಗುತ್ತಿಲ್ಲ. ಮಕ್ಕಳು ಕೊಠಡಿಯಲ್ಲಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಕೊಠಡಿಗಳು ಬಿದ್ದರೆ ಮಕ್ಕಳು ಸತ್ತುಹೋಗುತ್ತಾರೆ. ಅದಕ್ಕೆ security ನೀವು ಕೊಡುವಿರಾ? ಎಂದು ಕೇಳುತ್ತಿದ್ದಾರೆ. ಅಂಥ crisis ಇರುವಂಥ ಶಾಲೆಗಳನ್ನು ದಯವಿಟ್ಟು ಆದ್ಯತೆ ಮೇರೆಗೆ ರಿಪೇರಿ ಮಾಡಲಿಕ್ಕೆ ಅಥವಾ ಏನಾದರೂ alternate ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು: ಆಯಿತು.